# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 555 |
| ಸದಸ್ಯರ ಹೆಸರು | : | ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳು ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11.03.2025. |
| ಉತ್ತರಿಸಬೇಕಾದ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಸುಮಾರು 25 ವರ್ಷಗಳಿಂದ ಹೊರಗುತ್ತಿಗೆಯಡಿ ಡಾಟಾ ಎಂಟ್ರಿ ಆಪರೇಟರ್ /ಕಂಪ್ಯೂಟರ್ ಆಪರೇಟರ್ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರಿಗೆ ನೇರಪಾವತಿ / ನೇರನೇಮಕಾತಿ ಪರಿಗಣಿಸುವ ಕುರಿತು ಸರ್ಕಾರವು ಯಾವ ರೀತಿಯ ಚಿಂತನೆ ನಡೆಸಿದೆ: (ಸಂಪೂರ್ಣ ವಿವರ ನೀಡುವುದು) | ಮಹಾನಗರ ಪಾಲಿಕೆಗಳ ವೃಂದ ಮತ್ತು ನೇಮಕಾತಿ ನಿಯಮಗಳು 2011ರ ಪ್ರಕಾರ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳು ಸಿ ವೃಂದದ ಹುದ್ದೆಗಳಾಗಿದ್ದು, ಶೇ.50 ರಷ್ಟು ನೇರ ನೇಮಕಾತಿ ಮೂಲಕ ಹಾಗೂ ಶೇ.50 ರಷ್ಟು ಹೊರಗುತ್ತಿಗೆ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>ನಗರ ಸ್ಥಳೀಯ ಸಂಸ್ಥೆಗಳ ವೃಂದ ಮತ್ತು ನೇಮಕಾತಿ ನಿಯಮಗಳು 2010ರ ಪ್ರಕಾರ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳು "ಸಿ" ವೃಂದದ ಹುದ್ದೆಗಳಾಗಿದ್ದು, ಶೇ.100 ರಷ್ಟು ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 6 ಟಿಎಫ್‌ಪಿ 2018 ದಿನಾಂಕ:22.03.2019 ರಲ್ಲಿ ಆರ್ಥಿಕ ಇಲಾಖೆಯಿಂದ ಹೊರಡಿಸಿದ ದಿನಾಂಕ:29.12.2018 ರಂದು ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆ ಎದುರಾಗಿ ಕಾರ್ಯನಿರ್ವಹಿಸುತ್ತಿದ್ದ, ಗ್ರೂಪ್-ಡಿ, ಬೆರಳಚ್ಚುಗಾರರು/ ಡಿಇಒ, ವಾಹನ ಚಾಲಕರನ್ನು ಮಾತ್ರ ಹೊರಗುತ್ತಿಗೆ ಮೇಲೆ ಮುಂದುವರಿಸಬಹುದು ಅಥವಾ ಹೊರಗುತ್ತಿಗೆ ಅವಧಿ ಪೂರ್ಣಗೊಂಡಿದ್ದಲ್ಲಿ ಕೆ.ಟಿ.ಪಿ.ಪಿ. ಅಧಿನಿಯಮದ ಪ್ರಕಾರ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬಹುದೆಂದು ಆದೇಶಿಸಿರುತ್ತಾರೆ.<br>ಹಾಗಾಗಿ ಕಂಪ್ಯೂಟರ್ ಅಪರೇಟರ್/ ಡಾಟಾ ಎಂಟ್ರಿ ಅಪರೇಟರ್ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರನ್ನು ನೇರಪಾವತಿ /ನೇರ ನೇಮಕಾತಿಗೆ ಪರಿಗಣಿಸಲು ಪ್ರಸ್ತುತ ನಿಯಮಗಳಲ್ಲಿ ಅವಕಾಶ ವಿರುವುದಿಲ್ಲ.<br>ಸರ್ಕಾರದ ಪತ್ರ ಸಂಖ್ಯೆ: ನಅಇ 219 ಜಿಇಎಲ್ 2022(ಇ), ದಿನಾಂಕ:25.07.2024ರಲ್ಲಿ ರಾಜ್ಯದ ಎಲ್ಲಾ ಹೊರಗುತ್ತಿಗೆ ನೌಕರರ ವೇತನವನ್ನು ಯಥಾಸ್ಥಿತಿ ಪ್ರಕಾರ ಮುಂದುವರೆಸುವಂತೆ ಹಾಗೂ ಕಾರ್ಮಿಕ ಇಲಾಖೆಯು ಹೊರಡಿಸಿರುವ ಕನಿಷ್ಠ ವೇತನ ಕಾಯ್ದೆಯಂತೆ ಪರಿಶೀಲಿಸಿ ವೇತನ ಪಾವತಿಸಲು ಅಗತ್ಯ ಕ್ರಮವಹಿಸಲು ನಿರ್ದೇಶಿಸಲಾಗಿರುತ್ತದೆ. ಆದ್ದರಿಂದ ಕಂಪ್ಯೂಟರ್ ಆಪರೇಟರ್/ಡಾಟಾ ಎಂಟ್ರಿ ಆಪರೇಟರ್ ಸೇವೆಗಳನ್ನು ಖಾಯಂಗೊಳಿಸಲು ಅವಕಾಶವಿರುವುದಿಲ್ಲ.<br>ಪ್ರಸ್ತುತ ಹೊರಗುತ್ತಿಗೆಯಡಿ ಕಾರ್ಯನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಕಾರ್ಮಿಕ ಇಲಾಖೆಯು 2024-25 ನೇ ಸಾಲಿಗೆ ನಿಗಧಿಪಡಿಸಿರುವ ಕನಿಷ್ಠ ವೇತನದ ಪ್ರಕಾರ ವೇತನ ಪಾವತಿಸಲಾಗುತ್ತಿದ್ದು, ESI ಮತ್ತು PF ಸೌಲಭ್ಯವನ್ನುಕಲ್ಪಿಸಲಾಗಿರುತ್ತದೆ. ವಿವರಗಳು ಈ |
| ಆ) | ಡಾಟಾಎಂಟ್ರಿ ಆಪರೇಟರ್/ಕಂಪ್ಯೂಟರ್ ರವರುಗಳನ್ನು ಪೌರಕಾರ್ಮಿಕರ ಮಾದರಿಯಲ್ಲಿ ಹೊರಗುತ್ತಿಗೆ ರದ್ದುಪಡಿಸಿ, ನೇರ ಪಾವತಿಗೆ ಒಳಪಡಿಸುವಂತೆ ಸಂಬಂಧಪಟ್ಟ ಸಂಘಗಳಿಂದ ಹಲವಾರು ಬಾರಿ ಮನವಿ ಮಾಡಿದ್ದರೂ ಸಹ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | |

ಕೆಳಕಂಡಂತಿವೆ.

| ಕ್ರ. ಸಂ | ವಿವರ | ಮಹಾನಗರಪಾಲಿಕೆ (ರೂ.ಗಳಲ್ಲಿ) |
|---|---|---|
| 1 | ಕನಿಷ್ಠ ವೇತನ ತಿಂಗಳಿಗೆ (A) | 18788 |
| 2 | Employee's Contribution | 2255 |
| | | 141 |
| 3 | **ಒಟ್ಟು PF+ESI (B)** | 2395 |
| 4 | ಪೌರ ಕಾರ್ಮಿಕರಿಗೆ ಮಾಹೆಯಾನ ನೀಡಬೇಕಾದ ನಿವ್ವಳವೇತನ (ಪಿಎಫ್ &ಇಎಸ್ ಐ - ಕೆಲಸಗಾರರ ವಂತಿಕೆಯನ್ನು ಕಳೆದು (A-B) | 16392 |
| | **Round off** | 16392 |
| 5 | Employer's Contribution | 2442 |
| | | 611 |
| | ಒಟ್ಟು (PF+ESI) (C) | 3053 |
| | ಒಟ್ಟು (PF+ESI) (A+C) | 21841 |
| | **Round off to next ten** | 21841 |

ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆಯಿಂದ ಪ್ರತಿ ವರ್ಷ ಪರಿಷ್ಕರಿಸಲಾಗುವ ಕನಿಷ್ಠ ವೇತನವನ್ನು (VDA, ESIC 3.25%, EPF 13% ಒಳಗೊಂಡಂತೆ) ಡಾಟಾ ಎಂಟ್ರಿ ಆಪರೇಟರ್/ ಕಂಪ್ಯೂಟರ್ ಆಪರೇಟರ್‌ಗಳಿಗೆ ಸಂಬಂಧಪಟ್ಟ ಹೊರಗುತ್ತಿಗೆ ಏಜೆನ್ಸಿಯವರಿಂದ ಪಾವತಿ ಮಾಡಲಾಗುತ್ತಿರುತ್ತದೆ.

ನಗರಸಭೆ, ಪುರಸಭೆ, ಪಟ್ಟಣಪಂಚಾಯಿತಿಗಳಿಗೆ Notification No.KAE. 106 LWA 2021, Dated:28.07.2022ರನ್ವಯ Minimum wages and VDA from 01.04.2024 To 31.03.2025ಕ್ಕೆ ಅನ್ವಯಿಸುವಂತೆ ಕೆಳಕಂಡಂತೆ ವೇತನವನ್ನು ಪಾವತಿಸಲಾಗುತ್ತಿರುತ್ತದೆ.

| **ನಗರಸಭೆ** | **ಪುರಸಭೆ** | **ಪಟ್ಟಣ ಪಂಚಾಯಿತಿ** |
|---|---|---|
| 18,340/- | 17,953/- | 17,420/- |

| | | |
|---|---|---|
| ಇ) | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಡಾಟಾಎಂಟ್ರಿ ಆಪರೇಟರ್ / ಕಂಪ್ಯೂಟರ್ ಆಪರೇಟರ್‌ಗಳಿಗೆ ಸರ್ಕಾರದಿಂದ ಮಾಸಿಕ ನೀಡುತ್ತಿರುವ ವೇತನ ಮತ್ತು ಇತರೆ ಭತ್ಯೆಯ ಸಂಪೂರ್ಣವಾದ ಮಾಹಿತಿ ನೀಡುವುದು? | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಡಾಟಾಎಂಟ್ರಿ ಆಪರೇಟರ್ / ಕಂಪ್ಯೂಟರ್ ಆಪರೇಟರ್‌ಗಳಿಗೆ ಕಾರ್ಮಿಕ ಇಲಾಖೆಯು ಹೊರಡಿಸಿರುವ ಕನಿಷ್ಟ ವೇತನ ಕಾಯ್ದೆಯಂತೆ ಪರಿಶೀಲಿಸಿ, ವೇತನ ಪಾವತಿಸಲಾಗುತ್ತಿದೆ. |

**ಸಂಖ್ಯೆ: ನಅಇ 85 ಎಂಎನ್‌ಇ 2025 (ಇ)**

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು